# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 15.11.2011**

## ***ಪಾಲಿಕೆ ವತಿಯಿಂದ ಮತ್ತೆ ಅನಧಿಕೃತ ಆಪ್ಟಿಕ್ ಫೈಬರ್ ಕೇಬಲ್‌ಗಳನ್ನು ಕತ್ತರಿಸುವ ಕಾರ್ಯಾಚರಣೆ ಪ್ರಾರಂಭ***

ಆಪ್ಟಿಕ್ ಫೈಬರ್ ಕೇಬಲ್ ಸಂಸ್ಥೆಗಳ ವತಿಯಿಂದ ಅನಧಿಕೃತ ಕೇಬಲ್ ಅಳವಡಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಓಎಫ್‌ಸಿ ಸೇವಾ ಸಂಸ್ಥೆಯು ಕರ್ನಾಟಕ ಉಚ್ಛ ನ್ಯಾಯಾಲಯಕ್ಕೆ ಮೊರೆ ಹೋಗಿದ್ದರು. ಈ ಹಿನ್ನೆಲೆಯಲ್ಲಿ ಕರ್ನಾಟಕ ಉಚ್ಛ ನ್ಯಾಯಾಲಯವು ಅಂಡರ್‌ಗ್ರೌಂಡ್, ಓವರ್‌ಹೆಡ್ ಮತ್ತು ಚರಂಡಿಗಳಲ್ಲಿ ಅನಧಿಕೃತವಾಗಿ ಹಾಕಿರುವ ಕೇಬಲ್‌ಗಳನ್ನು ಕತ್ತರಿಸಲು ಪಾಲಿಕೆಯ ಪ್ರಸ್ತಾವನೆಯನ್ನು ಎತ್ತಿ ಹಿಡಿದಿದೆ.

ಮಾನ್ಯ ಉಚ್ಛ ನ್ಯಾಯಾಲಯವು ವಾದಿ ಪ್ರತಿವಾದಿಗಳ ವಾದವನ್ನು ಆಲಿಸಿ, ಪಾಲಿಕೆಗೆ ಓಎಫ್‌ಸಿ ಸೇವಾ ಪೂರೈಕೆದಾರರು ಹೆಚ್ಚುವರಿ ಡಾಟಾ ಒದಗಿಸುವವರೆಗೆ ಯಾವುದಾದರೂ ಇದ್ದಲ್ಲಿ ಎರಡು ವಾರಗಳವರೆಗೆ ಕೇಬಲ್‌ಗಳನ್ನು ಕಟ್ ಮಾಡದಿರಲು ಸಲಹೆ ನೀಡಿದೆ.

ಅದರಂತೆ, ಓಎಫ್‌ಸಿ ಸೇವಾ ಪೂರೈಕೆದಾರರು ಪೂರಕ ಡಾಟಾ 1600 ಕಿ.ಮೀ.ಗಳನ್ನು ಸಲ್ಲಿಸಿದೆ. ಇದು ಈ ಹಿಂದೆ ಘೋಷಿಸಿದ 4700 ಕಿ.ಮೀ.ಗಳ ಹೆಚ್ಚುವರಿಯಾಗಿದೆ. ಕ್ಷೇತ್ರದಲ್ಲಿ ಪುನಃ ಪರಿಶೀಲಿಸಿದ ನಂತರ ಏಜೆನ್ಸಿಗಳಿಂದ ಡಾಟಾ ನೀಡಿದ್ದಕ್ಕಿಂತ ಇನ್ನೂ ಹೆಚ್ಚಿಗೆ ಘೋಷಣೆಯಾಗದ ಕೇಬಲ್‌ಗಳು ಕಂಡುಬಂದಿದೆ.

ಆದ್ದರಿಂದ ಮಾನ್ಯ ಉಚ್ಛ ನ್ಯಾಯಾಲಯವು ನೀಡಿದ ಅಂತಿಮ ಗಡುವು ಮುಗಿದಿರುವುದರಿಂದ ಪಾಲಿಕೆಯು ಎಲ್ಲಾ ಅನಧಿಕೃತ ಕೇಬಲ್‌ಗಳನ್ನು ಕಟ್ ಮಾಡಲು ಕಾರ್ಯಾಚರಣೆಗೆ ಮುಂದಾಗಿದೆ. ದಿನಾಂಕ: 15.11.2011 ರಂದು ಕುರುಬರಹಳ್ಳಿ ಮುಖ್ಯರಸ್ತೆ, ಶಂಕರಮಠದ ಹತ್ತಿರ, ಮೋದಿ ಆಸ್ಪತ್ರೆ, ಮಹಾಲಕ್ಷ್ಮೀಪುರಂ ಇತ್ಯಾದಿ ಪ್ರದೇಶಗಳಲ್ಲಿ ಸುಮಾರು 25 ಕೇಬಲ್‌ಗಳನ್ನು ಕಟ್ ಮಾಡಲಾಗಿದೆ ಎಂದು ಪಾಲಿಕೆಯ ಆಯುಕ್ತರು ತಿಳಿಸಿದ್ದಾರೆ.

ಪಾಲಿಕೆಯು ಕೈಗೊಂಡ ಈ ಕಾರ್ಯಾಚರಣೆಯಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿದ್ದಕ್ಕೆ ವಿಷಾದ ವ್ಯಕ್ತಪಡಿಸುತ್ತಾ, ಓಎಫ್‌ಸಿ ಸೇವಾ ಪೂರೈಕೆದಾರರು ಭಾರಿ ಗಾತ್ರದ ಕೇಬಲ್‌ಗಳನ್ನು ಅನಧಿಕೃತವಾಗಿ ಮ್ಯಾನ್‌ಹೋಲ್, ಚರಂಡಿ ಮಾರ್ಗ, ಓವರ್‌ಹೆಡ್ ಇತ್ಯಾದಿಗಳಲ್ಲಿ ಹಾಕಿ ಅಸಹಕಾರ ಉಂಟು ಮಾಡಿ, ಸರ್ಕಾರಕ್ಕೆ ಭಾರಿ ನಷ್ಟ ಉಂಟು ಮಾಡಿರುತ್ತದೆ ಎಂದು ಆಯುಕ್ತರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**